


ಕಲೆ: ವೆಂಕಟರಮಣ ಭಟ್

ಬಚ್ಚಲ್ಲೂರಿಗೆ ಬಂದು ಹದವಾದ ಒಪ್ಪುವಂತ ಚಪ್ಪಡಿಯೊಂದನ್ನು ತೆಗೆದುಕೊಂಡು ಹೋಗಿ ಬಚ್ಚಲಿಗೆ ಅದಿಸಿಕೊಳ್ಳುವುದು ರೂಢಿಯಲ್ಲಿತ್ತು. ಈ ಊರ ಬಚ್ಚಲ್ಲಿಗೆ ಸೋಕಿದರೆ ಸಾಕು ಅದೆಂತದ್ದೆ ಒಡೆದಿರುವ, ಬಿರುಕು ಬಿಟ್ಟಿರುವ ಪಾದವಿದ್ದರೂ ಒಂದೇ ಉಜ್ಜಿಗೆ ಕೂಡಿ ಹೊಳಪು ಬಂದು ಬಿಡುತ್ತದೆ ಎಂಬುದು ಮಾತಾಗಿತ್ತು. ಹೊಸ ಮನೆ ಕಟ್ಟುವವರು ಇಡೀ ಮನೆ ತುಂಬ ಟೈಲ್ಸು ಗ್ರಾನೈಟ್ಸು ಹಾಕಿಸಿದರೂ ಸ್ನಾನದ ಮನೆಗೆ ಮಾತ್ರ ಬಚ್ಚಲ್ಲೂರಿನ ಕಲ್ಲನ್ನೇ ಅದಿಸುತ್ತಿದ್ದರು. ದೂರದೂರಿನವರು ಬಚ್ಚಲ್ಲೂರಿನ ಕಲ್ಲು ಬರುವವರೆಗೂ ಒಂದೆರೆಡು ದಿನ ಕೆಲಸ ನಿಂತರೂ ಸಮವೆ ಎಂದು ತಡೆದು ತಮ್ಮ ಬಚ್ಚಲು ಮನೆಯನ್ನು ಒಪ್ಪ ಮಾಡಿಕೊಳ್ಳುತ್ತಿದ್ದರು.

ಇದಿಷ್ಟೆ ಅಲ್ಲದೆ ಬಚ್ಚಲ್ಲೂರಿನ ಮೇಲಾಗಿ ಹಾದು ಹೋಗುವವರು, ಬಂದು ಹೋಗುವ ನೆಂಟರಿಷ್ಟರು ಈ ಊರಿಗೆ ಬರುವಾಗಲೇ ಇದೊಂದು ಮುಖ್ಯದ ಕೆಲಸವೆಂದೇ ಗುರುತಿಟ್ಟುಕೊಂಡು ಬಂಡೆ ಕಡೆಗೆ ಹೋಗಿ ತಮ್ಮ ಬೆನ್ನಿನ ಭಾಷೆಗೆ, ಅಂಗೈ ಹಿಡಿತಕ್ಕೆ ಹಿತವಾದ ಸೈಜಿನ, ಆಕಾರದ ಒಂದೆರೆಡು ಉಜ್ಗಲ್‌ಗಳನ್ನು ಅಲ್ಲೆ ದೊಡ್ಡ ಬಂಡೆಗೆ ಉಜ್ಜಿ ಮಸೆದು ನುಣುಪಾಗಿಸಿಕೊಂಡು ತಮ್ಮ ಕಿಸೆಗೆ ಬಿಟ್ಟುಕೊಂಡು ಹೋಗುವರು. ಬಚ್ಚಲ್ಲೂರಿಂದ ಬಂದಿದೀಯ ಎಂದರೆ 'ಎಲ್ಲಿ ಉಜ್ಗಲ್ ಎಂತದ ತಂದಿದೀಯ' ಎಂದು ಕೇಳಿ ನೋಡುವವರೂ ಇದ್ದರು. ಆ ಗುಡ್ಡದ ತಟದಲ್ಲೆ ಉಜ್ಗಲ್ಲಮ್ಮನ ಸಣ್ಣ ಗುಡಿ ಇದ್ದು ಅದನ್ನು ಅದೇ ಗುಡ್ಡದ ಚಪ್ಪಡಿಗಳಿಂದ ಕಟ್ಟಿ ಮಾಡು ಹಾಕಲಾಗಿತ್ತು. ಅದರ ಒಳಗಿರುವ ದೇವರೂ ಸಹ ಉಜ್ಗಲ್ಲೆ ಆಗಿದ್ದು, ದೊಪ್ಪ ಗಾತ್ರದ ಅದನ್ನು ಉಜ್ಗಲ್ಲಮ್ಮ ಎಂದು ಕರೆದು ಹೂವು ಮುಡಿಸಿ ದೀಪ ಹಚ್ಚಿ ಪೂಜೆ ಮಾಡಿಕೊಂಡು ಹೋಗುತ್ತಿದ್ದರು. ವರ್ಷಕ್ಕೊಂದು ದಿನ ಕೋಳಿ